# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 371
ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 13.08.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ 229*225 ಚದರಡಿ ಪ್ರದೇಶವನ್ನು ರೂ.30 ರ ವಾರ್ಷಿಕ ಬಾಡಿಗೆಗೆ 99 ವರ್ಷಗಳಿಗೆ ಮೆ: ಬೋರಿಂಗ್ ಇನ್ಸ್‌ಟಿಟ್ಯೂಟ್ ಗೆ ನೀಡಲು 1956 ನೇ ಸಾಲಿನಲ್ಲಿ ಹಿಂದಿನ ಮೈಸೂರು ಸರ್ಕಾರವು ಅನುಮೋದನೆ ನೀಡಿರುವುದು ಸರ್ಕಾರದ ಗಮನಕ್ಕಿದೆಯೇ: | ಸರ್ಕಾರದ ಆದೇಶ ಸಂಖ್ಯೆ: R9.2885-90/RM.45-52-53 ದಿನಾಂಕ: 01-06-1956 ರಂತೆ ಬೆಂಗಳೂರು ನಗರ ಜಿಲ್ಲೆ, ಸೆಂಟ್ ಮಾರ್ಕ್ಸ್ ರಸ್ತೆಯಲ್ಲಿರುವ 220*225 ಚದರಡಿ ಪ್ರದೇಶವನ್ನು ಪ್ರತಿ ವರ್ಷಕ್ಕೆ ರೂ.30/- ರಂತೆ 99 ವರ್ಷಗಳಿಗೆ ಮೆ: ಬೋರಿಂಗ್ ಇನ್ಸ್‌ಟಿಟ್ಯೂಟ್ ರವರಿಗೆ ಗುತ್ತಿಗೆಗೆ ಮಂಜೂರು ಮಾಡಲಾಗಿರುತ್ತದೆ. |
| ಆ) | ಸದರಿ ಇನ್ಸ್‌ಟಿಟ್ಯೂಟ್ ಮಾಡಿದ್ದ ಕೋರಿಕೆಯ ಮೇರೆಗೆ 150*100 ಚದರಡಿ ಪ್ರದೇಶವನ್ನು ಮೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್ ಉಪಗುತ್ತಿಗೆ ನೀಡಲು ಫೆಬ್ರವರಿ 1969 ರಲ್ಲಿ ಅನುಮತಿ ನೀಡಿದ್ದು, ಮೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್ ನಿಂದ ಗುತ್ತಿಗೆ ಬಾಡಿಗೆಯನ್ನು ವಸೂಲಾತಿ ಮಾಡಿದಾಗ ಶೇಕಡ 50 ರಷ್ಟನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಿರುವುದು, ನಿವೇಶನದ ಈ ಭಾಗವನ್ನು 1969 ರಿಂದಲೂ ಉಪ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುವುದು ನಿಜವೇ; | ಸರ್ಕಾರದ ಆದೇಶ ಸಂಖ್ಯೆ: RD 155 ONA 67 ದಿನಾಂಕ: 11-02-1969 ರಂತೆ ಬೌರಿಂಗ್ ಇನ್ಸ್‌ಟಿಟ್ಯೂಟ್ ಕ್ಲಬ್ ರವರಿಗೆ ಗುತ್ತಿಗೆ ನೀಡಿರುವ 220*225 ಅಡಿಗಳ ಪೈಕಿ 150*100 ಅಡಿಗಳ ಜಾಗವನ್ನು ಶೇಕಡಾ 50% ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಉಪಗುತ್ತಿಗೆಯನ್ನು IOCL (ಮೆ\|\|ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ) ರವರಿಗೆ ಮಂಜೂರು ಮಾಡಲಾಗಿರುತ್ತದೆ |
| ಇ) | ಹಾಗಿದ್ದಲ್ಲಿ ಗುತ್ತಿಗೆ ಕರಾರು ಪತ್ರದ ಪ್ರಕಾರ ಮತ್ತು ಉಪಗುತ್ತಿಗೆ ಅವಧಿಯು ಯಾವಾಗ ಮುಗಿಯಬೇಕಿತ್ತು; ಪ್ರಸ್ತುತ ಇರುವ ಬೆಳವಣಿಗೆಗಳೇನು; ಮೆ: ಬೋರಿಂಗ್ ಇನ್ಸ್‌ಟಿಟ್ಯೂಟ್ ಸಂಸ್ಥೆಯು ಮೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಉಪಗುತ್ತಿಗೆ ಆಧಾರದ ಮೇಲೆ ನೀಡಿದ್ದ ನಿವೇಶನದ ವಾಸ್ತವಿಕ ಉದ್ದೇಶವೇನು; ಪ್ರಸ್ತುತ ಯಾವ ಚಟುವಟಿಕೆಗಳು ನಿವೇಶನದಲ್ಲಿ ನಡೆಯುತ್ತಿದೆ; (ವಿವರಿಸುವುದು) | ಸರ್ಕಾರದ ಆದೇಶ ಸಂಖ್ಯೆ:R9.2885-90/RM.45-52-53 ದಿನಾಂಕ: 01-06-1956 ರಂತೆ ಬೆಂಗಳೂರು ನಗರ ಜಿಲ್ಲೆ, ಸೆಂಟ್ ಮಾರ್ಕ್ಸ್ ರಸ್ತೆಯಲ್ಲಿರುವ 220*225 ಚದರಡಿ ಪ್ರದೇಶವನ್ನು 99 ವರ್ಷಗಳಿಗೆ ಮೆ: ಬೋರಿಂಗ್ ಇನ್ಸ್‌ಟಿಟ್ಯೂಟ್ ರವರಿಗೆ ಗುತ್ತಿಗೆಗೆ ಮಂಜೂರು ಮಾಡಲಾಗಿರುತ್ತದೆ. ತದನಂತರ ಬೌರಿಂಗ್ ಇನ್ಸ್‌ಟಿಟ್ಯೂಟ್ ಕ್ಲಬ್ ರವರಿಗೆ ಗುತ್ತಿಗೆ ನೀಡಿರುವ 220*225 ಅಡಿಗಳ ಪೈಕಿ 150*100 ಅಡಿಗಳ ಜಾಗವನ್ನು ದಿನಾಂಕ: 11-02-1969 ರಂತೆ ಉಪಗುತ್ತಿಗೆಯನ್ನು IOCL (ಮೆ\|\|ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ) ರವರಿಗೆ ಮಂಜೂರು ಮಾಡಲಾಗಿರುತ್ತದೆ. ಈ ಆದೇಶದಲ್ಲಿ ಎಷ್ಟು ವರ್ಷಗಳ ವರೆಗೆ ಉಪಗುತ್ತಿಗೆ ನೀಡಿರುವ ಬಗ್ಗೆ ನಮೂದಾಗಿರುವುದಿಲ್ಲ ಮತ್ತು ಗುತ್ತಿಗೆ ಕರಾರು ಪತ್ರ ಕಂಡುಬರುವುದಿಲ್ಲ.<br>ಮೆ\|\|ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ ರವರಿಗೆ ಪ್ರಸ್ತಾಪಿತ ಜಾಗವನ್ನು ಸರ್ಕಾರದಿಂದ ಉಪಗುತ್ತಿಗೆಗೆ ಮಂಜೂರು ಮಾಡಲಾದ ಉದ್ದೇಶಕ್ಕೆ ಹಾಲಿ ಬಳಸುತ್ತಿರುತ್ತಾರೆ |

| | | |
|---|---|---|
| ಈ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969 ರನ್ವಯ (Karnataka Land Grant Rules) ಭೂಮಿಯು ಅಥವಾ ಭೂಮಿಯ ಒಂದು ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಿದ್ದಲ್ಲಿ ಗುತ್ತಿಗೆಯನ್ನು ಅನುಮೋದಿಸಲು ಅಧಿಕಾರವಿರುವ ಅಧಿಕಾರಿಯವರು ಗುತ್ತಿಗೆದಾರರಿಗೆ 3 ತಿಂಗಳ ನೋಟೀಸ್ ನೀಡಿ ಅಂತಹ ಭೂಮಿಯನ್ನು ಪುನಃ ತಮ್ಮ ವಶಕ್ಕೆ ತೆಗೆದುಕೊಳ್ಳಬಹುದಾಗಿತ್ತಲ್ಲವೇ; ಈ ಬಗ್ಗೆ ಸರ್ಕಾರದ ಕ್ರಮಗಳೇನು; ಮೆ: ಇಂಡಿಯನ್ ಆಯಿಲ್ ಕಾರ್ಪೊರೇಷನ್ ಗೆ ನೀಡಿದ್ದ ಉಪಗುತ್ತಿಗೆ ಆಧಾರದ ನಿವೇಶನದ ಭಾಗವನ್ನು ಗುತ್ತಿಗೆದಾರರು ಯಾವ ಉದ್ದೇಶಕ್ಕೆ ಭೂಮಿಯನ್ನು ನೀಡಲಾಗಿತ್ತೋ ಆ ಉದ್ದೇಶಕ್ಕೆ ಬಳಸುತ್ತಿಲ್ಲವಾದ್ದರಿಂದ ನಿಯಮಗಳ ಪ್ರಕಾರ ನಿವೇಶನದ ಆ ಭಾಗವನ್ನು ಪುನಃ ತಮ್ಮ ವಶಕ್ಕೆ ಪಡೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಇಲ್ಲವಾದ್ದಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು; ಈ ನಿವೇಶನಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಗುತ್ತಿಗೆ ಬಾಡಿಗೆಗೆ ಸಂಗ್ರಹವಾದ ರಾಜಸ್ವವೆಷ್ಟು? | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 25ರಡಿ ಭೂ ಮಂಜೂರಾತಿಯನ್ನು ರದ್ದುಪಡಿಸಲು ಅವಕಾಶವಿರುತ್ತದೆ. ಅದರಂತೆ, ಉಪ ಗುತ್ತಿಗೆ ನೀಡಿರುವ ಜಮೀನನ್ನು ರದ್ದುಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br><br>ಈ ನಿವೇಶನಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಗುತ್ತಿಗೆ ಬಾಡಿಗೆಗೆ ಸಂಗ್ರಹವಾದ ರಾಜಸ್ವದ ಕುರಿತಂತೆ ಸಂಸ್ಥೆಯವರೊಂದಿಗೆ ಸಮನ್ವಯ ಸಾಧಿಸಿಕೊಂಡು ಸದರಿಯವರು ಸರ್ಕಾರದ ಲೆಕ್ಕಶೀರ್ಷಿಕೆಗೆ ಗುತ್ತಿಗೆ ಮೊತವನ್ನು ಪಾವತಿಸಿರುವ ರಸೀದಿಗಳನ್ನು ಪರಿಶೀಲಿಸಲಾಗುವುದು.<br><br>ಮುಂದುವರೆದು, 2013-14 ನೇ ಸಾಲಿನಲ್ಲಿ ಮಹಾಲೆಕ್ಕಪರಿಶೋಧಕರ ವರದಿಯಂತೆ ರೂ 3.14 ಕೋಟಿ ಸರ್ಕಾರಕ್ಕೆ ನಷ್ಟ ಉಂಟಾಗಿರುವುದರಿಂದ ಸದರಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಬೌರಿಂಗ್ ಇನ್ಸ್‌ಟಿಟ್ಯೂಟ್ ಕ್ಲಬ್ ರವರಿಗೆ ದಿನಾಂಕ: 22-12-2017 ಮತ್ತು 19-11-2018 ರಂದು ಬಾಕಿ ಮೊತ್ತವನ್ನು ಪಾವತಿಸಲು ನೋಟೀಸ್‌ನ್ನು ಜಾರಿ ಮಾಡಿದ್ದು ಸದರಿ ನೋಟೀಸ್‌ಗೆ ಸಂಬಂಧಿಸಿದಂತೆ ಸಂಸ್ಥೆಯವರು ಘನ ಉಚ್ಚನ್ಯಾಯಾಲಯದಲ್ಲಿ WP 50118/2019 ರಂತೆ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಘನ ಉಚ್ಚನ್ಯಾಯಾಲಯವು ದಿನಾಂಕ: 24-02-2023 ರಂದು ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ.<br><br>ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರನ್ನು ಖುದ್ದಾಗಿ ಭೇಟಿ ಮಾಡಿ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆ ಬರಲು ಅನುವಾಗುವಂತೆ ಮತ್ತು ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸುವ ಸಂಬಂಧ ಮಧ್ಯಂತರ ಅರ್ಜಿಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 111 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು